Crl.Misc.No.1838/2025, RW-1

ಶಾಮೀದಸಾಬ ತಂದೆ ಅಮೀನಸಾಬ ವಾಲಿಕಾರ

**ದಿನಾಂಕ 04-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎ.ಎನ್. ವಕೀಲರಿಂದ:-**

ಮೊಹಮ್ಮದ್ ಸಾಯಿಲ್ ಅವರ ವಯಸ್ಸು 7 ವರ್ಷ, ಮೊಹಮ್ಮದ್ ಸಾಕೀಬ್ ಅವರ ವಯಸ್ಸು 6 ವರ್ಷ ಇದೆ ಎಂದರೆ ಸರಿ. ಕೃಷ್ಣಾಪುರದಲ್ಲಿ ಸದ್ಯ ನಾನು ಮತ್ತು ಮತ್ತು ನಮ್ಮ ತಾಯಿ ಲಾಳಬಿಯವರು ವಾಸವಾಗಿರುತ್ತೇವೆ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ. ಯಲ್ಲಿ ಚಾಲಕ ಕೆಲಸಕ್ಕೆ ಸೇರಿ ಸುಮಾರು 12 ವರ್ಷಗಳಾಗಿರುತ್ತವೆ. 2 ಮತ್ತು 3ನೇ ಅರ್ಜಿದಾರರು ಯಾವ ಶಾಲೆಯಲ್ಲಿ ಎಷ್ಟನೇ ತರಗತಿ ಓದುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ ಅವರು ತವರು ಮನೆಯಲ್ಲಿ ಇರುತ್ತಾರೆ. 2ನೇ ಅರ್ಜಿದಾರ ಆಂಗ್ಲೀಷ್ ಶಾಲೆಯಲ್ಲಿ 2ನೇ ತರಗತಿ ಮತ್ತು 3ನೇ ಅರ್ಜಿದಾರ ಯು.ಕೆ.ಜಿ ಓದುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಿಂಗಸುಗೂರಿಗೆ ನಾನು 4-5 ವರ್ಷಗಳಿಂದ ಬಂದಿಲ್ಲ ಕಾರಣ ಅವರ ಅಣ್ಣ ನನಗೆ ಅವಮಾನ ಮಾಡಿದ್ದರಿಂದ ನಾನು ಬಂದಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಈಗ್ಗೆ 15 ದಿನಗಳ ಹಿಂದೆ ಲಿಂಗಸುಗೂರಿಗೆ ಅರ್ಜಿದಾರರಿಗೆ ಮಾತನಾಡಿಸಲು ಹೋಗಿರುತ್ತೇನೆ ಎಂದು ಬರೆಸಿರುವುದಿಲ್ಲ. ಮದುವೆಯಾದ ಮೇಲೆ 1ನೇ ಅರ್ಜಿದಾರಳು ಕೃಷ್ಣಾಪುರದಲ್ಲಿ ಬಂದು 2-3 ವರ್ಷ ಸುಖ ಸಂಸಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೇವಲ 8 ದಿನ ಮಾತ್ರ ಇದ್ದೇವು ಎನ್ನುತ್ತಾರೆ. ನಾವು ಬೆಂಗಳೂರಿಗೆ ಹೋಗಿರುತ್ತೇವೆ. ಒಂದು ವರ್ಷದ ಬಳಿಕ 1ನೇ ಅರ್ಜಿದಾರಳು ಅವರ ತವರು ಮನೆಗೆ ಹೋಗಿರುತ್ತಾಳೆ. ನಾನು ನಮ್ಮ ಮನೆಗೆ ಹೋಗಿರುತ್ತೇನೆ. 2018 ರಲ್ಲಿ 1ನೇ ಅರ್ಜಿದಾರಳು ಬೆಂಗಳೂರಿನಿಂದ ತವರು ಮನೆಗೆ ಬಂದಿರುತ್ತಾಳೆ.

2. ನನ್ನ ತಕರಾರಿನಲ್ಲಿ ಅರ್ಜಿದಾರಳು ಒಂದು ವರ್ಷ ಬೆಂಗಳೂರಿನಲ್ಲಿ ಬಾಳುವೆ ಮಾಡಿ ಗರ್ಭಿಣಿಯಾದ ಕಾರಣ ಹೆರಿಗೆಗಾಗಿ ಬಂದವರು ಮತ್ತೆ ವಾಪಸ್ ಬಂದಿಲ್ಲ ಎಂದು ಬರೆಸಿರುತ್ತೇನೆ. ನಮ್ಮ ಮದುವೆಯಾಗಿ 10 ವರ್ಷಗಳಾಗಿರುತ್ತವೆ ಎಂದರೆ ಸರಿ. ನಾವು ಕಾನೂನು ಪ್ರಕಾರ ಅರ್ಜಿದಾರಳಿಗೆ ಬಂದು ಬಾಳುವೆ ಮಾಡುವಂತೆ ನೋಟಿಸು ಕಳುಹಿಸಿರುವುದಿಲ್ಲ. ನಾವು ನಮ್ಮ ಸಮಾಜದ ಹಿರಿಯರ ಮೂಲಕ ಕೇಳಿರುತ್ತೇವೆ. ಆದರೆ ಅವರ ಮನೆಯವರು ತಿರಸ್ಕಾರ ಮಾಡಿರುತ್ತಾರೆ. ಸುಮಾರು ಬಾರಿ ಬಂದಿರುತ್ತೇವೆ ಆದರೆ ದಿನಾಂಕ ನೆನಪಿಲ್ಲ. ಹಸನಸಾಬ

ಕೋಡಿಹಾಳ, ರಫೀಕ್ ಚಿತ್ತರಗಿ, ಲಾಟಿ ಬಾಬು, ರಸೂಲಸಾಬ ವಾಲಿಕಾರ ಸುಮಾರು 5-6 ಜನ ಸೇರಿ 6 ತಿಂಗಳ ಹಿಂದೆ ಲಿಂಗಸುಗೂರಿಗೆ ಬಂದಿದ್ದೇವು. ನಾವು ಯಾರೂ ಗುರು-ಹಿರಿಯರು ಲಿಂಗಸುಗೂರಿಗೆ ಬಂದಿಲ್ಲದಿದ್ದರೂ ಸಹ ಈ ಕೇಸಿನ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ 1ನೇ ಅರ್ಜಿದಾರಳು ಕೃಷ್ಣಾಪುರಕ್ಕೆ ಹೋಗಿ ಬಾಳುವೆ ಮಾಡಿರುತ್ತಾಳೆ ಎಂದರೆ ಸರಿಯಲ್ಲ. 2 ಮತ್ತು 3ನೇ ಅರ್ಜಿದಾರರು ಕೃಷ್ಣಾಪುರದಲ್ಲಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಲಿಂಗಸುಗೂರಿನಲ್ಲಿ ಜನಿಸಿರುತ್ತಾರೆ. ನಮ್ಮ ತಾಯಿ ಲಾಲಬಿ ಅರ್ಜಿದಾರಳಿಗೆ ತುಂಬಾ ಕಿರುಕುಳ ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನನಗೆ ಕುಡಿಯುವುದು ಮತ್ತು ಇಸ್ಪೀಟ್ ಆಡುವ ಚಟ ಇದೆ ಎಂದರೆ ಸರಿಯಲ್ಲ. 1ನೇ ಅರ್ಜಿದಾರಳಿಗೆ ನಾವು ರೂ.4,00,000/- ಮತ್ತು 4 ತೊಲೆ ಬಂಗಾರವನ್ನು ತವರು ಮನೆಯಿಂದ ತರುವಂತೆ ಕಿರುಕುಳ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಮದುವೆಗಾಗಿ ರೂ.4,00,000/- ಹಣವನ್ನು ಅವರ ತವರು ಮನೆಯವರಿಗೆ ಕೊಟ್ಟಿರುತ್ತೇವೆ. ನಾನು ಯಾವುದೇ ಹಣ ಕೊಡದೇ ಇದ್ದರೂ ಸಹ ಈ ಕೇಸಿನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ 1ನೇ ಅರ್ಜಿದಾರಳಿಗೆ ಸೀಮೆ ಎಣ್ಣೆ ಹಾಕಿದ್ದಳು ಎಂದರೆ ಸರಿಯಲ್ಲ. ನಾವು ಅರ್ಜಿದಾರಳಿಗೆ 3 ವರ್ಷಗಳ ಹಿಂದೆ ಕಿರುಕುಳ ಕೊಟ್ಟು ಮನೆಯಿಂದ ಹೊರ ಹಾಕಿರುತ್ತೇವೆ ಎಂದೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರಳು 7 ವರ್ಷ ದಿಂದ ನಮ್ಮ ಮನೆಯಲ್ಲಿ ಇಲ್ಲ ಎನ್ನುತ್ತಾರೆ. 1ನೇ ಅರ್ಜಿದಾರಳ ತಂದೆ ಕೃಷ್ಣಾಪುರಕ್ಕೆ ಹೋಗಿ ಅವರನ್ನ ವಾಪಸ್ ಕರೆದುಕೊಳ್ಳಲು ಹೇಳಿದರೂ ಸಹ ನಾವು ಕರೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಕರೆದುಕೊಂಡು ಹೋಗಲು ತಯಾರಿರುತ್ತೇನೆ. 1ನೇ ಅರ್ಜಿದಾರಳಿಗೆ ಜೀವಕ್ಕೆ ಅಪಾಯ ಇದೆ ಎಂದರೆ ಸರಿಯಲ್ಲ.

3. ನಿ.ಆರ್-1 ರಿಂದ 4 ಫೋಟೋಗಳನ್ನು ಸುಮಾರು 4 ವರ್ಷಗಳ ಹಿಂದೆ ತೆಗೆಸಿರುತ್ತೇವೆ. ಕೆಲವು ಸೆಲ್ಫಿ ಕೆಲವು ಅಣ್ಣ ತೆಗೆದಿರುತ್ತಾರೆ. ಆಗ ಅವರ ಮನೆಯಲ್ಲಿ ಎಲ್ಲರೂ ಇದ್ದರು. ನಿ.ಆರ್-1 ರಿಂದ 4 ರಲ್ಲಿ ನಮ್ಮ ಅತ್ತೆ-ಮಾವ ಇಲ್ಲ ಎಂದರೆ ಸರಿ. ನಾವು ಕೇವಲ ನಮ್ಮ ಫೋಟೋಗಳನ್ನು ತೆಗೆದಿರುವರಿಂದ ಅವರು ಫೋಟೋಗಳಲ್ಲಿ ಇರುವುದಿಲ್ಲ. ಸದರಿ ಫೋಟೋಗಳು ಲಿಂಗಸುಗೂರಿನಲ್ಲಿ ತೆಗೆದಿಲ್ಲ ಕೃಷ್ಣಾಪುರದಲ್ಲಿ ತೆಗೆದಿರುವ ಫೋಟೋ ಎಂದರೆ ಸರಿಯಲ್ಲ. ಸದರಿ ಮನೆ ನಮ್ಮ ಮಾವನ ಮನೆ ಅಲ್ಲ ಎಂದರೆ ಸರಿಯಲ್ಲ. ನನಗೆ ಸಂಬಳ ರೂ.56,800/- ಇದೆ ಎಂದರೆ ಸರಿಯಲ್ಲ.

ಕಡಿತಗೊಂಡು ರೂ.49,500/- ಬರುತ್ತದೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ಆಗಸ್ಟ್-2025 ರಲ್ಲಿ ಹಾಕಿರುತ್ತಾರೆ ಎಂದರೆ ಸರಿ. ಈ ಕೇಸು ಹಾಕಿದ್ದರಿಂದ ಸ್ಯಾಲರಿ ಅಡ್ವಾನ್ಸ್ ಪಡೆದು ರೂ.15,000/- ಕಡಿತಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ಸಂಬಳ ಕಡಿಮೆ ತೋರಿಸಿದರೆ ಜೀವನಾಂಶ ಕಡಿಮೆಯಾಗುತ್ತದೆ ಎಂದು ಇಲಾಖೆಯಲ್ಲಿ ಸೇರಿಕೊಂಡು ಸಂಬಳ ಕಡಿತಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ 2 ಎಕರೆ 6 ಗುಂಟೆ ಮತ್ತು 26 ಗುಂಟೆ ಜಮೀನು ಕೃಷ್ಣಾಪುರದಲ್ಲಿ ಇವೆ ಎಂದರೆ ಸರಿ. ಅವು ನಮ್ಮ ತಂದೆಯ ಹೆಸರಿನಲ್ಲಿವೆ. ಅವು ನೀರಾವರಿ ಇವೆ ಎಂದರೆ ನನಗೆ ಜಮೀನಿನ ಮಾಹಿತಿ ಇರುವುದಿಲ್ಲ. ಈ ಜಮೀನಿನಲ್ಲಿ ನನಗೆ ಹಕ್ಕು ಇದ್ದು ಬೇರೆ ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾವು 7 ಜನ ಮಕ್ಕಳಿರುತ್ತೇವೆ. ನನಗೆ 3 ಜನ ಅಣ್ಣ-ತಮ್ಮಂದಿರು ಮತ್ತು 4 ಜನ ಅಕ್ಕ-ತಂಗಿಯರು ಇರುತ್ತೇವೆ. ನನಗೆ 7 ಜನ ಸಹೋದರ-ಸಹೋದರಿ ಇದ್ದಾರೆ ಎಂದು ನನ್ನ ತಕರಾರಿನಲ್ಲಿ ಬರೆಸಿರುವುದಿಲ್ಲ. 1ನೇ ಅರ್ಜಿದಾರಳು ಟೈಲರಿಂಗ್ ಮಾಡುತ್ತಾಳೆ ಎಂದು ತಕರಾರಿನಲ್ಲಿ ಬರೆಸಿರುತ್ತೇನೆ. 1ನೇ ಅರ್ಜಿದಾರಳು ಯಾವುದೇ ಟೈಲರಿಂಗ್ ಮಾಡುವುದಿಲ್ಲ ಎಂದರೆ ಸರಿಯಲ್ಲ. ತಿಂಗಳೀಗೆ 1ನೇ ಅರ್ಜಿದಾರಳಿಗೆ ರೂ.10,000/- ಮತ್ತು 2 ರಿಂದ 4ನೇ ಅರ್ಜಿದಾರರಿಗೆ ರೂ.4,000/- ಕೊಡುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಆರೋಗ್ಯಕ್ಕೆ ರೂ.25,000/- ಖರ್ಚು ಮಾಡಿದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ಅವರು ಆಯುರ್ವೇದಿಕ್ ಔಷಧಿ ಪಡೆಯುತ್ತಾರೆ. ನಮ್ಮ ತಾಯಿ ಆರೋಗ್ಯವಾಗಿದ್ದಾರೆ ಎಂದೆರ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಕಥೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.